# 'ಆನಂದವೇ ಮಾನವ ಧರ್ಮ'



ಧಾರವಾಡ : ಮನುಷ್ಯ ನಿನ್ನ ಹತ್ತಿರ ಜಗತ್ತಿನ ಎಲ್ಲ ಸಂಪತ್ತನ್ನು ಇಟ್ಟುಕೊಂಡರೂ ನೀನು ಎಂದೂ ನಿಜವಾದ ಆನಂದವನ್ನು ಪಡೆಯಲು ಸಾಧ್ಯವಿಲ್ಲ ಎಂದು ಮುಡಕಲಕಟ್ಟಿ ಆತ್ಮಾನಂದ ಆಶ್ರಮದ ಶ್ರೀ ಈರಣ್ಣ ಸತ್ಯಣ್ಣವರ ಹೇಳಿದರು. ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ದಿನಾಂಕ ೧೩–೧–೨೦೧೯ ರಂದು ಆಯೋಜಿಸಿದ್ದ ಶ್ರೀ ಮಾರ್ಕಂಡೇಯ ದೊಡಮನಿ ಶಿಕ್ಷಣ ಸಮಿತಿ ಹಾಗೂ ಚಾರಿಟೇಬಲ್ ಟ್ರಸ್ಟ್ ದತ್ತಿ ಕಾರ್ಯಕ್ರಮದಲ್ಲಿ 'ಆನಂದವೇ ಮಾನವ ಧರ್ಮ' (ಶ್ರೀ ಗುರುದೇವ ಆತ್ಮಾನಂದರ ಪ್ರವಚನ ಸಂಗ್ರಹ) ಗ್ರಂಥ ಬಿಡುಗಡೆಗೊಳಿಸಿ ಉಪನ್ಯಾಸ ನೀಡುತ್ತಾ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಮನುಷ್ಯ ಆನಂದದಿಂದ ಇರಬೇಕೆಂದರೆ, ಮೊದಲು ನಿನ್ನನ್ನು ನೀನು ಅರಿತುಕೊಳ್ಳಬೇಕು. ಅಂದಾಗ ಮಾತ್ರ ನಿಜವಾದ ಆನಂದವನ್ನು ಹೊಂದಲು ಸಾಧ್ಯ. ಆತ್ಮಜ್ಞಾನಿಗಳು ಮಾತ್ರ ಈ ಜಗತ್ತಿನಲ್ಲಿ ಆನಂದದಿಂದ ಇರುತ್ತಾರೆ. ಯಾರು ಆತ್ಮಜ್ಞಾನವನ್ನು ಹೊಂದಿರುವುದಿಲ್ಲವೋ ಅವರು ಮಾನವರಷ್ಟೇ, ನಿಜವಾದ ಮಾನವರಲ್ಲ. ಮಾನವನು ತನ್ನ ಪಂಚೇಂದ್ರಿಯ ಮೂಲಕ ಆನಂದವನ್ನು ಹೊಂದಲು ತವಕಿಸುತ್ತಾನೆ. ಆದರೆ ಆತ್ಮಜ್ಞಾನದಿಂದಲ್ಲ. ಯಾರು ಪಂಚೇಂದ್ರಿಯಗಳ ಮೂಲಕ ಆನಂದವನ್ನು ಹೊಂದಲು ಬಯಸುತ್ತಾರೋ ಅವರು ಎಂದಿಗೂ ನಿಜವಾದ ಆನಂದವನ್ನು ಪಡೆಯಲು ಸಾಧ್ಯವಿಲ್ಲ. ಯಾರು ತಮ್ಮ ಪಂಚೇಂದ್ರಿಯಗಳನ್ನು ಹತೋಟಿಯಲ್ಲಿ ಇಟ್ಟುಕೊಂಡು ಮನಸ್ಸನ್ನು ನಿಗ್ರಹ ಮಾಡಿಕೊಳ್ಳುತ್ತಾರೊ ಅವರು ಮಾತ್ರ ಆತ್ಮಜ್ಞಾನ ಹೊಂದಲು ಸಾಧ್ಯ. ಭಾರತ ದೇಶದ ಒಂದೊಂದು ಗ್ರಾಮಗಳಲ್ಲಿಯೂ ಭಗವಂತನು ಒಬ್ಬೊಬ್ಬ ಆತ್ಮಜ್ಞಾನಿಗಳನ್ನು ಹುಟ್ಟಿಸಿದ್ದಾನೆ. ಆತ್ಮಜ್ಞಾನಿಗಳೆಂದರೆ ಸತ್ಪುರುಷರು, ನಾವು ಇತಿಹಾಸವನ್ನು ಅವಲೋಕಿಸಿದಾಗ ಇದನ್ನು ಕಾಣುತ್ತೇವೆ. ನಾವು ಸತ್ಪುರುಷರ ಮಾತುಗಳನ್ನು ಕೇಳಿ ಬಹಳ ಚೆನ್ನಾಗಿ ಹೇಳಿದ್ದಾರೆ ಎನ್ನುತ್ತೇವೆ ವಿನಃ ಅವುಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಪಾಲನೆ ಮಾಡುವುದಿಲ್ಲ. ಎಲ್ಲಿಯವರೆಗೆ ಸತ್ಪುರುಷರ ತತ್ವ, ಸಿದ್ಧಾಂತಗಳನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ನಾವು ನಿಜವಾದ ಆನಂದವನ್ನು ಹೊಂದಲು ಸಾಧ್ಯವಿಲ್ಲ ಎಂದರು. ನಮ್ಮಲ್ಲಿ ಅರಿವು ಇದೆ ಎನ್ನುವುದನ್ನು ಮರೆತು, ಅಜ್ಞಾನದಲ್ಲಿ ಮುಳುಗಿ ಹೋಗಿದ್ದೇವೆ. ಭಗವಂತ ಏ ಮಾನವ ಸಾವಿರಾರು ಜೀವರಾಶಿಗಳಲ್ಲಿ ನಿನಗೆ ಮಾತ್ರ ಅರಿವನ್ನು ದಯಪಾಲಿಸಿದ್ದೇನೆ. ಆದರೆ ಅದನ್ನು ನೀನು ಮರೆತು ಅರಿವು ಇಲ್ಲದ ಪಶುಪಕ್ಷಿಗಳಿಗಿಂತ ಹೀನಾಯ ಸ್ಥಿತಿಯಲ್ಲಿ ಬದುಕುವುದನ್ನು ಕಂಡು ಮರಮರ ಮರಗುತ್ತಿದ್ದಾನೆ. ನಾವು ಆನಂದ ಪಡೆಯಬೇಕಾದರೆ ಗುರುವಿನ ಮಾರ್ಗದರ್ಶನದಲ್ಲಿ ಅವರ ತತ್ವ, ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಅರಿವಿನಿಂದ ಜೀವನ ಸಾಗಿಸಿದಾಗ ನೀಜವಾದ ಆನಂದ, ಸುಖ ಹೊಂದಲು ಸಾಧ್ಯ ಎಂದರು.

ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ, ಪೂಜ್ಯ ಶ್ರೀ ಸಮರ್ಥ ಶಿವಾನಂದ ಸ್ವಾಮಿಗಳು, ಸುರೇಬಾನ ಮನಿಹಾಳ, ನಾಗನೂರ ಅವರು ಮಾತನಾಡಿ, ಮನುಷ್ಯ ಆನಂದವನ್ನು ಬಾಹ್ಯ ವಸ್ತುಗಳಿಂದ ಪಡೆದುಕೊಳ್ಳಲು ಹವಣಿಸುತ್ತಾನೆ. ಆದರೆ ಅದು ಬಾಹ್ಯ ವಸ್ತುಗಳಿಂದ ಸಿಗುವುದಿಲ್ಲ. ಅವನು ಹುಡುಕಿ ಹುಡುಕಿ ಹತಾಶನಾಗುತ್ತಾನೆ. ಆದರೆ ಸಿಗುವುದಿಲ್ಲ. ಆನಂದವನ್ನು ನಾವು ಪಂಚೇಂದ್ರಿಯಗಳಿಂದ ಹುಡುಕಲು ಸಾಧ್ಯವಿಲ್ಲ. ಆನಂದಕ್ಕೆ ಆಕಾರ, ರೂಪ, ಬಣ್ಣ, ವಾಸನೆ ಯಾವುದೂ ಇಲ್ಲ. ಅದು ನಮ್ಮ ಅಂತರಂಗದ ಅನುಭವಕ್ಕೆ ಬರುವುದೇ ಆನಂದ. ಆನಂದ ನಮ್ಮ ಅಂತರಂಗದೊಳಗೆ ಅಡಗಿದೆ. ಅದನ್ನು ಬೇರೆಲ್ಲೂ ಹುಡುಕುವ ಅಗತ್ಯವಿಲ್ಲ. ಅದನ್ನು ಕಂಡುಕೊಳ್ಳುವ ಮಾರ್ಗ ಅನುಸರಿಸಬೇಕು. ಆನಂದಕ್ಕೆ ಜಾತಿ, ಮತ, ಧರ್ಮ, ಪಂಥಗಳಿಲ್ಲ. ಯಾವುದೆ ಜಾತಿಯವರಿರಲಿ ಆನಂದ ಬಯಸುತ್ತಾನೆ. ಆದರೆ ಅರವಿನ ಕೊರತೆಯಿಂದ ಅದು ಸಿಗುತ್ತಿಲ್ಲ. ನಾವು ಭೂಮಿಯ ಮೇಲೆ ಇನ್ನೊಬ್ಬರಿಗೆ ತೊಂದರೆ ಕೊಟ್ಟು, ಇನ್ನೊಬ್ಬರ ಮನಸ್ಸಿಗೆ ಘಾತವ ಮಾಡಿ, ಒಬ್ಬರನ್ನೊಬ್ಬರು ಹಿಂಶಿಸಿ ಬದುಕುತ್ತಿದ್ದೇವೆ. ನಮಗೆಲ್ಲಿ ದೊರೆಯಬೇಕು ಆನಂದ. ಇದನ್ನೆಲ್ಲ ಬಿಟ್ಟು ಸತ್ಪುರುಷರ ಹೇಳಿದ ಸಾತ್ವಿಕ ಮಾರ್ಗದಲ್ಲಿ ನಡೆದುಕೊಂಡು, ಪರಸ್ಪರ ಅರಿತು, ಬೆರೆತು, ಸಹಕಾರದಿಂದ ಅನ್ಯೋನ್ಯವಾಗಿ ಶುದ್ಧ ಮನಸ್ಸಿನಿಂದ ಬಾಳಿ ಬದುಕಿದರೆ ಆನಂದ ಹೊಂದಲು ಸಾಧ್ಯ ಎಂದರು.

ಇದೇ ಸಂದರ್ಭದಲ್ಲಿ ಗ್ರಂಥ ದಾನಿಗಳಾದ ಕಾರವಾರದ ಇನಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಕಾಲೇಜಿನ ಡಾ. ಶಿವಾನಂದ ದೊಡಮನಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ದತ್ತಿದಾನಿ ಹಾಗೂ ಗ್ರಂಥ ಸಂಪಾದಕರಾದ, ಶರಣ ಹರಳಯ್ಯ ಪತ್ರಿಕೆ ಸಂಪಾದಕ ಶ್ರೀ ಮಾರ್ಕಂಡೇಯ ದೊಡಮನಿ ದಂಪತಿಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ (ಇಟಗಿ), ಸ್ವಾಗತಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಸತೀಶ ತುರಮರಿ ನಿರೂಪಿಸಿ, ವಂದಿಸಿದರು. ಶ್ರೀಮತಿ ಮಹಾದೇವಿ ದೊಡಮನಿ ಸಹೋದರಿಯರು ಪ್ರಾರ್ಥನೆ ಹಾಡಿದರು.

ಕಾರ್ಯಕ್ರಮದಲ್ಲಿ ವೀರಣ್ಣ ಒಡ್ಡೀನ, ಮಾರುತಿ ಅಗಸಿಮನಿ, ಮುರಿಗೆಪ್ಪ ಹೊರಕೇರಿ, ಎಂ. ಬಿ. ಹೆಗ್ಗೇರಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

**ಸತೀಶ ತುರಮರಿ**
ಕಾರ್ಯಕಾರಿ ಸಮಿತಿ ಸದಸ್ಯರು